ಅಪ್ಪಟ ಬಂಗಾರಕ್ಕೆ ಎಲ್ಲಿ ಹೋಗುವುದೆಂದು ತಿಳಿಯದೆ ಒಂದು ಕೇಜಿ ಕಾಗೆ ಬಂಗಾರ ತಂದಿರುವೆ ಒಪ್ಪಿಸಿಕೊಳ್ಳಿ' ಎಂದನು.

ಅಕ್ಬರ್ 'ನಿನ್ನದು ಅಧಿಕ ಪ್ರಸಂಗವಾಯಿತು'

ಬೀರಬಲ್ಲ 'ಲೋಹ ಲೋಹವೆ, ಉಪಯೋಗ ಮಾತ್ರ ಬೇರೆ ಬೇರೆ, ಹುಶ್ ಎಂದರೆ ಕಾಗೆ ಹಾರಿ ಹೋಗಿ ಬಂಗಾರ ಉಳಿಯುವುದಿಲ್ಲವೆ' ಎಂದ.

ಅಕ್ಬರ್ 'ಚರ್ಚೆ ಸಾಕು, ನಿಮ್ಮ ಮನೆಯಲ್ಲಿ ಒಂದು ಕೇಜಿಯಷ್ಟು ಬಂಗಾರದ ಆಭರಣಗಳಿವೆ ಎಂದು ನಿಮ್ಮ ಪಕ್ಕದ ಮನೆಯ ಸೇತುರಾಮಯ್ಯ ದೂರು ನೀಡಿದ್ದಾನೆ, ಅಷ್ಟೊಂದು ಆಭರಣಗಳ ಎಲ್ಲಿ ಕೊಳ್ಳೆ ಹೊಡೆದಿರಿ?' ಎಂದು ಪ್ರಶ್ನಿಸಿದ.

ಬೀರಬಲ್ಲ 'ನಮ್ಮ ಮನೆಯ ಕಪಾಟಿನ ಬೀಗದ ಕೈ ಮನೇಲೆ ಇರುತ್ತೆ, ನಿಮ್ಮ ಕೋಶಾಧಿಕಾರಿಯೆ ನಮ್ಮ ಮನೆಯೆಲ್ಲಾ ತಲಾಶ್ ಮಾಡಿ ಎಷ್ಟು ಬಂಗಾರ ಸಿಗುತ್ತೊ ತೂಕ ಹಾಕಲಿ, ಕೆ.ಜಿ.ಗೆ ಇನ್ನೆಷ್ಟು ಬೇಕಾಗುವುದೋ ಅಷ್ಟೂ ಬಂಗಾರವನ್ನು ಸೇತುರಾಮಯ್ಯನಿಂದ ವಸೂಲಿ ಮಾಡಲಿ' ಎಂದನು.

ಬೀರಬಲ್ಲನ ಸಲಹೆ ಅಕ್ಬರನಿಗೆ ಸರಿಯೆನಿಸಿತು. ಕೂಡಲೇ ಕೋಶಾಧಿಕಾರಿಗೆ ಕಾರ್ಯಪ್ರವೃತ್ತನಾಗಲು ಸೂಚನೆ ನೀಡಿದನು. ಅದರಂತೆ ಕೋಶಾಧಿಕಾರಿಗೆ ಬೀರಬಲ್ಲನ ಮನೆಯಲ್ಲಿ ದೊರೆತ್ತಿದ್ದು ಇನ್ನೂರ ಇಪ್ಪತ್ತೈದು ಗ್ರಾಂ ಬಂಗಾರ, ಉಳಿದ ಏಳುನೂರ ಎಪ್ಪತ್ತೈದು ಗ್ರಾಂ ಬಂಗಾರಕ್ಕೆ ಸೇತುರಾಮಯ್ಯನ ಮನೆಗೆ ಲಗ್ಗೆಯಿಟ್ಟರು. ಅವರ ಮನೆಯಲ್ಲಿ ಸಿಕ್ಕಿದ್ದು ಎಪ್ಪತ್ತೈದು ಗ್ರಾಂ ಬಂಗಾರ. ರಾಜಭಟರು ಆತನನ್ನ ಆಸ್ಥಾನಕ್ಕೆ ಕರೆತಂದರು. ವಿಚಾರಣೆ ಆರಂಭವಾಯಿತು.

ಅಕ್ಬರ್ 'ಸೇತುರಾಮಯ್ಯ, ನೀವೇಕೆ ಬೀರಬಲ್ಲನ ಮೇಲೆ ಸುಳ್ಳು ದೂರು ನೀಡಿದ್ದು?' ಎಂದು ಕೇಳಿದರು.

ಸೇತುರಾಮಯ್ಯ 'ಆತನ ಹೆಂಡತಿ ನಾಲ್ಕಾರು ಆಭರಣಗಳ ಧರಿಸಿ, ಬೇಕುಬೇಕಂತಲೆ ನಮ್ಮ ಮನೆಯ ಮುಂದೆ ಅಡ್ಡಾಡುತ್ತಾ ಇರ್ತಾರೆ, ಅದನ್ನ ಕಂಡ ನನ್ನ ಹೆಂಡತಿಯೂ ನನಗೂ ಆಭರಣಗಳ ಮಾಡಿಸಿಕೊಡಿ ಎಂದು ನನಗೆ ಮಾನಸಿಕ ಹಿಂಸೆ ನೀಡುತ್ತಿದ್ದಾಳೆ. ನನ್ನ ದುಡಿಮೆ ಅಷ್ಟಕಷ್ಟೆ, ನಾ ಹೇಗೆ ಮಾಡಿಸಲಿ.

ಅಕ್ಬರ್ 'ಬೀರಬಲ್ಲರ ಹೆಂಡತಿಯ ಆಭರಣಗಳು ಹೋದರೆ ನಿನ್ನ ಹೆಂಡತಿ ಸುಮ್ಮನಾಗುತ್ತಾಳೆ ಎಂದು ಊಹಿಸಿ ಸುಳ್ಳು ದೂರು ನೀಡಿರವೆಯಾ, ಬೀರಬಲ್ಲರೆ ನೀವೆ ಈ ಆಸಾಮಿಗೆ ಯಾವ ಶಿಕ್ಷೆಯೆಂದು ತಿಳಿಸಿ.'

ಬೀರಬಲ್ಲ 'ಆತನಿಗೆ ಶಿಕ್ಷೆ ನೀಡಿದರೆ ಸಾಲದು, ಬೇಕು ಬೇಕಂತಲೇ ಅನಗತ್ಯ ಆಭರಣಗಳ ಧರಿಸಿ ಆತನ ಹೆಂಡತಿಯ ಮುಂದೆ ಅನಗತ್ಯ ಪ್ರದರ್ಶನ ಮಾಡಿದ ನನ್ನ ಹೆಂಡತಿ, ಮತ್ಸರ ಮನಸ್ಸಿನ ಆತನ ಹೆಂಡತಿ. ಈ ಮೂವರು ಮೂರು ವಾರಗಳ ಕಾಲ ನಮ್ಮ ಕುದುರೆ ಲಾಯವನ್ನು ಅಚ್ಚುಕಟ್ಟಾಗಿ ತೊಳೆಯಲಿ' ಎಂದನು. ಬೀರಬಲ್ಲನ ತೀರ್ಪಿಗೆ ಅಕ್ಬರನು ಪ್ರಸನ್ನನಾದನು.

# ಕೋರಿಕೆ

■ ಗಣಪತಿ ಬಾಳೆಗದ್ದೆ

ಕರ್‍ರಂ ಕುರ್‍ರಂ
ನರಿಯಣ್ಣ
ಅಂಗಡಿ
ಬಾಗಿಲು
ತೆರೆಯಣ್ಣ
ಬಣ್ಣದ
ಅಂಗಿಯು
ಬೇಕಣ್ಣ
ಹೊರಗಡೆ
ಜೋರು
ಮಳೆಯಣ್ಣ
ಚಂದದ
ಕೊಡೆಯೂ
ಬೇಕಣ್ಣ
ತಿನ್ನಲು
ಚಕ್ಕುಲಿ
ನೀಡಣ್ಣ
ಬಿಸಿಬಿಸಿ
ಕಾಫಿ
ತಾರಣ್ಣ
ಎಲ್ಲಕು
ಸೇರಿ
ಎಷ್ಟಣ್ಣ?
ಈಗಲೆ
ತಂದೆ
ನಿಲ್ಲಣ್ಣ!



# ಮಂಗಾಟ

■ ಸ. ಗಿರಿಜಾಶಂಕರ, ಚಿಕ್ಕಮಗಳೂರು

ದೊಡ್ಡ ದೊಡ್ಡ ಪೊಟರೆ ಮರ
ಕಂಡರಿವಕೆ ಆದರ
ಮಲೆಯನಾಡ ಬನಗಳಲ್ಲಿ
ಇವುಗಳದ್ದೇ ಕಲರವ

ಹೆಣ್ಣು ಗಂಡು ಒಂದು ಗೂಡಿ
ಜೊತೆ ಜೊತೆಯಲಿ ಹಾರಾಡಿ
ಪೊಟರೆ ಇರುವ ಮರಗಳತ್ತ
ಹೊರಟವದೊ ಮಂಗಾಟ ಜೋಡಿ

ಹಳದಿಕೊಕ್ಕು ಬಿಳಿಯ ಮೈ
ಬಂಗಾರದಂತೆ ಹೊಳೆವ ಬಣ್ಣ
ಹುಡುಕುತ್ತಾ ಬಗೆಬಗೆಯ ಹಣ್ಣ
ಕಾಡಿನುದ್ದ ಹೊರಟವಣ್ಣ

ಹಾರಿನೆಗೆದು ಒಂದುಗೂಡಿ
ಮಧುಚಂದ್ರದಾಟವಾಡಿ
ಹೆಣ್ಣು ಹಕ್ಕಿ ಪೊಟರೆ ಸೇರಿತು
ತೂತನಿಟ್ಟು ಪೊಟರೆ ಮುಚ್ಚಿತು

ಗಂಡುಹಕ್ಕಿ ಹೊರಗೆ ಇದ್ದು
ಪಕ್ವಗೊಂಡ ಹಣ್ಣನಾಯ್ದು
ಹರ್ಷದಿಂದ ಹಾರಿ ಬಂದು
ನಲ್ಲೆ ಬಾಯಲದನಿಟ್ಟು ಮೆರೆಯಿತು

ಮೊಟ್ಟೆಯಿಟ್ಟು ನಲಿದ ಹೆಣ್ಣು
ನಲ್ಲ ಕೊಟ್ಟ ಹಣ್ಣ ಮೆದ್ದು
ಕಾವುಕೊಡುತ ದಿನವ ನೂಕಿ
ಮರಿಗಳಿಗೆ ಕಾದು ನಿಂತಿತು

ಬೇಟೆ ತೀಟೆಯಿಂದ ಮನುಜ
ಗಂಡು ಹಕ್ಕಿಯನ್ನು ಕೊಂದ್ರೆ
ಆಹಾರ ಸಿಗದೆ ಹೆಣ್ಣುಹಕ್ಕಿ
ಮರಿಗಳೊಡನೆ ಸಾವನಪ್ಪುದು

ಮಲೆಯನಾಡ ಹಸಿರು ಬನದ
ಹೆಮ್ಮೆ ನಮಗೆ ಈ ಮಂಗಾಟ
ಹಾರಾಟ ನೋಡಿ ನಾವು ನಲಿವ
ಬೇಟೆ ತೀಟೆ ನಿಲಿಸುವ